**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು**

**<u>ಸಿ.ಸಿ.ನಂ. 29/2023.</u>**

**ದಿನಾಂಕಃ06.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| ಸಾಕ್ಷಿಯ ಹೆಸರು | ಚಿದಾನಂದಮೂರ್ತಿ ಜಿ ಕೆ | ಚಾಸಾ-1, ಪ್ರಾಸ-1 |
| ತಂದೆಯ ಹೆಸರು | ಕೆಂಚಪ್ಪ ಟಿ | |
| ವಯಸ್ಸು | 42 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ | ಗೌಡನಕಟ್ಟೆಹಳ್ಳಿ ಗ್ರಾಮ | |

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯವಿದೆ. ಅವರು ನನ್ನ ಸಂಬಂದಧಿಕರು. ಚಾಸಾ 5 ರಿಂದ 9 ರವರ ಪರಿಚಯವಿದೆ. ದಿಃ28.10.2022 ರಂದು ಸಂಜೆ 6.30 ಗಂಟೆಯ ಸಮಯದಲ್ಲಿ ಗೌಡನಕಟ್ಟೆಹಳ್ಳಿಯ ಸರ್ವೆ ನಂ.19 ರಲ್ಲಿರುವ ನನ್ನ ತಂದೆ ಹೆಸರಿನಲ್ಲಿರುವ ತೋಟದಲ್ಲಿ ನಾವು ಕೋಳಿ ಶೆಡ್ ಮಾಡಿಕೊಂಡಿದ್ದು ಅದನ್ನು ಲಾಕ್ ಮಾಡಿಕೊಂಡು ಬರುವಾಗ ಆರೋಪಿತರು ಬಂದು ಹಳೆಯ ದ್ವೇಷದಿಂದ 1 ನೇ ಆರೋಪಿಯು ನನ್ನನ್ನು ಉದ್ದೇಶಿಸಿ ಬೋಳಿಮಗನೆ, ಸೂಳೆಮಗನೆ ಎಂದು ಅವಾಚ್ಯವಾಗಿ ಬೈದು ಅಲ್ಲಿಯೇ ಬಿದ್ದಿದ್ದ ತೆಂಗಿನ ಎಡಮಟ್ಟೆಯಿಂದ ಬೆನ್ನಿಗೆ, ಎದೆಗೆ ಹೊಡೆದಿರುತ್ತಾರೆ. ಆಗ ನಾನು ಅಮ್ಮಅಮ್ಮ ಎಂದು ಕೂಗಿದೆ. 2 ನೇ ಆರೋಪಿಯು ಕುಡುಗೋಲಿನಿಂದ ನನಗೆ ಹೊಡೆಯಲು ಬೀಸಿದ್ದು ನಾನು ತಪ್ಪಿಸಿಕೊಂಡಿರುತ್ತೇನೆ. 1 ನೇ ಆರೋಪಿ ನನ್ನ ಕುತ್ತಿಗೆ ಹಿಸುಕಿಕೊಂಡು ಹಿಂದಕ್ಕೆ ಸು.10 ಅಡಿ ತಳ್ಳಿಕೊಂಡು ಹೋಗಿರುತ್ತಾರೆ. ನಾನು ಕೆಳಕ್ಕೆ ಬಿದ್ದಿರುತ್ತೆನೆ. ಆಗ 1 ನೇ ಆರೋಪಿ ನನ್ನ ಕುತ್ತಿಗೆ ಹಿಸುಕಿ ಕಾಲಿನಿಂದ ನನ್ನ ಎದೆಗೆ ಹೊಡೆದು ಕಾಲನ್ನು ನನ್ನ ಕುತ್ತಿಗೆಯ ಮೇಲೆ ಇಟ್ಟುಕೊಂಡಿದ್ದ.

ಅಷ್ಟರಲ್ಲಿ ಅಕ್ಕ-ಪಕ್ಕದ ಚಾಸಾ 4, 5, 6, 7, 9 ರವರು ಬಂದು 1 ನೇ ಆರೋಪಿಯನ್ನು ತಳ್ಳಿ ನನ್ನನ್ನು ಎಬ್ಬಿಸಿ ನನ್ನನ್ನು ಉಪಚರಿಸಿರುತ್ತಾರೆ. ನನ್ನನ್ನು ಚಾಸಾ 4 ರವರು ನನ್ನನ್ನು ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ಆ ನಂತರ, ಚಾಸಾ 8 ರವರು ಮನೆಗೆ ಬಂದು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಕಡೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ದಿಃ28.10.2022 ರಿಂದ 03.11.2022 ರ ವರೆಗೂ ಚಿಕಿತ್ಸೆ ಪಡೆದಿರುತ್ತೇನೆ. ನಮ್ಮ ಜಮೀನಿನ ಪಕ್ಕದಲ್ಲಿ ಆರೋಪಿಗಳ ಜಮೀನು ಇದೆ. ಈ ಜಮೀನಿನ ವಿಚಾರವಾಗಿ ನಮ್ಮ ಮದ್ಯೆ ಆಗಾಗ ಜಗಳವಾಗುತ್ತದೆ. ಜನ ಬಂದ ನಂತರ ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ.

ದಿಃ31.10.2022 ರಂದು ಪೊಲೀಸರು ಆಸ್ಪತ್ರೆಗೆ ಬಂದು ನನ್ನನ್ನು ವಿಚಾರಣೆ ಮಾಡಿ ನನ್ನ ಮೌಖಿಕ ದೂರನ್ನು ಪಡೆದು ಬರವಣಿಗೆ ಮಾಡಿಕೊಂಡಿರುತ್ತಾರೆ. ಸಾಕ್ಷಿಯು ದೂರಿನಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಆ ದಿನ ಆರೋಪಿತರು ಹಲ್ಲೆ ಮಾಡಲು ಬಳಸಿದ ಎಡಮಟ್ಟೆ ಮತ್ತು ಕುಡುಗೋಲನ್ನು ನೋಡಿ ಗುರುತಿಸಿದ್ದು ಅದನ್ನು ಕ್ರಮವಾಗಿ ಮು ಮಾ 1 ಮತ್ತು 2 ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಆರೋಪಿತರೆ ಆ ದಿನ ಹೊಡೆದು ಗಲಾಟೆ ಮಾಡಿರುತ್ತಾರೆ.

**<u>ಪಾಟೀಸವಾಲುಃ ಆರೋಪಿತರ ಪರ ಕೆ ವಿ ಎಸ್ ವಕೀಲರಿಂದ ಃ</u>**

ನಮ್ಮ ಕುಟುಂಬದ ಮೂಲ ಪುರುಷ ಅಕ್ಕಿರಂಗಪ್ಪ ಎಂದರೆ ನನಗೆ ನನ್ನ ತಂದೆ ಮತ್ತು ತಾತಾ ಮಾತ್ರ ಗೊತ್ತಿದ್ದಾರೆ. ಅಕ್ಕಿರಂಗಪ್ಪನ ಮಕ್ಕಳು ಕರಿಯಪ್ಪ ಮತ್ತು ತಿಮ್ಮಪ್ಪ ಎಂದರೆ ಸರಿ. ಕರಿಯಪ್ಪನಿಗೆ ಮೂರು ಜನ ಮಕ್ಕಳು ರಾಮಪ್ಪ, ಕೃಷ್ಣಪ್ಪ, ಚಂದ್ರಪ್ಪ.

ರಾಮಪ್ಪ ರವರ ಮಕ್ಕಳೇ 1 ಮತ್ತು 2 ನೇ ಆರೋಪಿತರು ಎಂದರೆ ಸರಿ.

ತಿಮ್ಮಪ್ಪ ರವರಿಗೆ ಇಬ್ಬರು ಮಕ್ಕಳು, ಕೆಂಚಪ್ಪ ಮತ್ತು ಹನುಮಂತಪ್ಪ ಎಂದರೆ ಸರಿ. ನಾನು ಕೆಂಚಪ್ಪ ರವರ ಮಗ ಎಂದರೆ ಸರಿ. ನನ್ನ ತಮ್ಮನ ಹೆಸರು ಗಿರಿಧರ. ಹನುಮಂತಪ್ಪ ರವರಿಗೆ ಮೂರುಜನ ಮಕ್ಕಳು. ಹನುಮಂತಪ್ಪ ರವರ ಜಮೀನನ್ನು ಆರೋಪಿಗಳು ಗುತ್ತಿಗೆಗೆ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹನುಮಂತಪ್ಪ ರವರ ಜಮೀನು ಸರ್ವೆ ನಂ.19 ರಲ್ಲಿ ಬರುತ್ತದೆ ಎಂದರೆ ನಮ್ಮ ಮತ್ತು ಹನುಮಂತಪ್ಪ ರವರ ಜಮೀನು ಒಂದೇ ಸರ್ವೆ ನಂಬರಿನಲ್ಲಿ ಇದೆ. ನಾನು ಹನುಮಂತಪ್ಪ ರವರ ಜಮೀನು ದಾಟಿ ನಮ್ಮ ಜಮೀನಿಗೆ ಹೋಗಬೇಕಾಗುತ್ತದೆ ಎಂದರೆ ಸರಿ.

ಹನುಮಂತಪ್ಪ ರವರ ಜಮೀನಿನಲ್ಲಿ ಆರೋಪಿತರು ಜೋಳ ಬೆಳೆಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಹನುಮಂತಪ್ಪ ರವರ ಜಮೀನಿನಲ್ಲಿ ಜೋಳ ಬೆಳೆದಿದ್ದು, ಸದರಿ ಜೋಳದ ಮೇಲೆ ನಾನು ಟ್ರ್ಯಾಕ್ಟರ್ ತೆಗೆದುಕೊಂಡುಹೋಗಿದ್ದೆ ಎಂದರೆ ಸರಿಯಲ್ಲ. ಈ ಹಿಂದೆ ಕಲ್ಲು ಕಂಬ ಹಾಕುವ ವಿಚಾರ ಸದರಿ ಜಮೀನಿನಲ್ಲಿ ಗಲಾಟೆಯಾಗಿತ್ತು ಎಂದರೆ ಸರಿ. ಪೊಲೀಸರು ಕಲ್ಲು ಕಂಬ ನೆಡುವ ವಿಚಾರಕ್ಕೆ ಬಂದು ಸರ್ವೇಯರ್ ರವರನ್ನು ಕರೆಸಿ ಕಲ್ಲು ಕಂಬಗಳನ್ನು ನೆಡಿ ಎಂದು ಹಿಂಬರಹ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ 30 ವರ್ಷಗಳ ಹಿಂದೆ ಕಲ್ಲು ಕಂಬ ನೆಟ್ಟಿರುತ್ತಾರೆ. ಹಿಂದೆ ಕಲ್ಲುಕಂಬ ನೆಟ್ಟಿರುತ್ತೇವೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ನೀಡಿರುವುದಿಲ್ಲ.

ಗಲಾಟೆಯು 6.30 ರಿಂದ 6.45 ರ ವರೆಗೂ ಆಗಿರಬಹುದು. ಗಲಾಟೆ ಆಗಿದೆ ಎನ್ನುವಾಗ ಯಾರು ಇರಲಿಲ್ಲ ನಾನು ಕೂಗಿಕೊಂಡಾಗ ಎಲ್ಲಾ ಬಂದಿರುತ್ತಾರೆ. ಸರ್ವೆ ನಂಬರ್ 19 ರಲ್ಲಿ ಆರೋಪಿಗಳಿಗೆ ಸೇರಿದ ಜಮೀನು ಇದೆ ಎಂದರೆ ಸರಿ. ಆರೋಪಿತರು ನನಗೆ ಅವಾಚ್ಯ ಶಬ್ಧಗಳಿಂದ ಬೈದಿಲ್ಲ, ಯಾವುದೇ ಆಯುಧದಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಮು ಮಾ 1 ತರಹದ ಎಡೆಮಟ್ಟೆ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ಮು ಮಾ 2 ತರಹದ ಕುಡುಗೋಲು ಜಮೀನಿನಲ್ಲಿ ಕೆಲಸ ಮಾಡುವವರು

ಇಟ್ಟುಕೊಂಡಿರುತ್ತಾರೆ ಎಂದರೆ ಅದು 2 ನೇ ಆರೋಪಿಯ ಕೈನಲ್ಲಿ ಇತ್ತು ಎಂದು ನುಡಿಯುತ್ತಾರೆ. ಮು ಮಾ 2 ಆರೋಪಿಯ 2 ರವರ ಕೈನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನಗೆ ಕಾಲಿನಿಂದ ತುಳಿದಿರುವುದಿಲ್ಲ ಎಂದರೆ ಸರಿಯಲ್ಲ.

ಚಾಸಾ 4 ನನ್ನ ಚಿಕ್ಕಪ್ಪನ ಮಗ. ಚಾಸಾ 5 ರಿಂದ 7 ನನ್ನ ಅಕ್ಕಪಕ್ಕದ ಜಮೀನಿನವರು. ಗಲಾಟೆ ನಡೆದಿದೆ ಎನ್ನುವ ಸ್ಥಳದ ಚೆಕ್ಕುಬಂದಿ ನನಗೆ ಗೊತ್ತು, ಪೂರ್ವಕ್ಕೆ ಕೆಂಚಪ್ಪ ರವರ ಸರ್ವೆ ನಂ.98 ರ ಜಮೀನು, ಉತ್ತರ ಮತ್ತು ಪಶ್ಚಿಮಕ್ಕೆ ಕರಿಯಪ್ಪ ಮತ್ತು ಲಕ್ಕಮ್ಮ ರವರ ಜಮೀನು, ದಕ್ಷಿಣಕ್ಕೆ ಹನುಮಂತಪ್ಪ ರವರ ಜಮೀನು ಇದೆ.

ಪೊಲೀಸರು ನಾನು ಆಸ್ಪತ್ರೆಯಲ್ಲಿ ಇದ್ದಾಗ ಮಧ್ಯಾಹ್ನ ಊಟದ ಸಮಯದಲ್ಲಿ ಹೇಳಿಕೆ ದೂರು ಪಡೆದಿರುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಅನುಮತಿ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಒ,

Sd/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.